distribution of Union Excise duties including Additional Duties of Excise in lieu of sales tax (Under Article 272 of the Constitution fall in the second category. Necessary legislation will be promoted for implementing them. The recommendations relating to distribution of grants to States in lieu of tax on railway passenger fares and resoheduling of Central Loans will be implemented by executive order.

7. The Commission has made certain other recommendations in the Report. These do not require any immediate action and will be considered in due course.

(SRI B. SWAMY RAO in the Chair)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕ್ಲಾರಿಫಿಕೇಷನ್ ಕೇಳಬಹುದೇ. ಈ ೨೩೨ ಕೋಟಿ ರೂಪಾಯಿ ೫ ವರ್ಷದಲ್ಲಿ ಡಿಫಿಸಿಟ್ ಆಗುತ್ತದೆ, ರೀಸೆಂಟ್ ಆಗಿ ಶ್ರೀ ಮಧುದಂಡವತೆಯವರು ಬಂದಾಗ, in some other form compensate ಮಾಡುತ್ತೇವೆಂದು ಹೇಳಿದರು. whether in the form of grant or he is going to restore the share amount which you have categorically stated has been reduced from 4.822% to 3.83% ಇದನ್ನು ರೆಸ್ಟೋರ್ ಮಾಡುತ್ತೀರಾ ಅಥವಾ ಗ್ರಾಂಟ್ ಎಂದು ಕೊಡುತ್ತೀರಾ ?

SRI M. RAJASHEKARA MURTHY.—When once the recommendations have been accepted, it cannot be revised. They may think some other method of compensating. The matter is being taken up with the Government of India.

ನಿಯಮ ೩೩೪ ರ ಮೇರೆಗೆ

೧) ಕೆ. ಎಸ್. ಈಶ್ವರಪ್ಪ
೨) ಗೋಪಿನಾಥ ಆರ್ ಸಾಂದ್ರ
೩) ವಾಟಾಳ್ ನಾಗರಾಜ್

} ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಮಂಗಳೂರಿನ ಹಳೆ ಬಂದರಿನ ಅಳಿವೆ ಬಾಗಿಲಲ್ಲಿ ಹೂಳೆತ್ತುವ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಹಳೆ ಬಂದರಿನ ಅಳಿವೆ ಬಾಗಿಲಲ್ಲಿ ಹೂಳೆತ್ತಲು ಅನೇಕ ವರ್ಷಗಳಿಂದ ಕೇಳುತ್ತಾ ಬರಲಾಗಿದೆ. ಕಳೆದ ನಾಲ್ಕೈದು ವರ್ಷಗಳಿಂದ ಹೂಳೆತ್ತದೆ ಇದ್ದುದರಿಂದ, ಅನೇಕ ಜೀವಹಾನಿ ಬೋಟುಗಳು ಮುಳುಗಿದ್ದು, ಹೀಗೆ ಅಪಾರ ಹಾನಿಯಾಗಿರುತ್ತದೆ. ಈ ವಿಚಾರದಲ್ಲಿ ಕಟ್ಟಕಡೆಗೆ ಕಳೆದ ವರ್ಷದ ಅಡಿಯಲ್ಲಿ ಮೊಗವೀರರು ಮೀನುಗಾರರು ೧೦ ದಿವಸಗಳ ಧರಣಿ ಕೂಡ ಮಾಡಿದ್ದರು. ಇದೀಗ ಇನ್ನೂ ಹೂಳೆತ್ತುವ ಕಾರ್ಯ ಪ್ರಾರಂಭವಾಗಿಲ್ಲ. ಮೀನುಗಾರರು ಕಂಗಾಲಾಗಿರುತ್ತಾರೆ. ಹೊಸ ಡ್ರೆಜ್ಜರು ಬಂದಿದೆಯೇ, ಹೂಳೆತ್ತುವ ಕಾರ್ಯ ಶೀಘ್ರ ಮಾಡಿ ಮಂಗಿಸಲಾಗುವುದೇ. ಬಹು ವರ್ಷಗಳ ಈ ನ್ಯಾಯಯುತ ಕೆಲಸವನ್ನು ಪೂರೈಸಿ, ಮೀನುಗಾರರ ಹಾಹಾಕಾರವನ್ನು ನೀಗಿಸುವುದು ಅತೀ ಅಗತ್ಯವಾಗಿರುತ್ತದೆ. ಅಲ್ಲದೆ ಅಲ್ಲಿ ಬ್ರೇಕ್ ವಾಟರ್ ಮಾಡುವಂತಹ ವಿಚಾರ ಬಹಳ ವರ್ಷಗಳ ಹಿಂದೆ ಹೇಳಿದೆ, ಆ ವಿಚಾರ ಏನಾಗಿದೆ ಅದು ಪ್ರಾರಂಭವಾಗಿರುತ್ತದೆಯೋ ಈ ಕುರಿತು ಮಾನ್ಯ ಮೀನುಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಾದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಬಿ. ಎಂ. ಇದಿನಬ್ಬರವರು ಪ್ರಸ್ತಾಪಿಸಿರುವ ಅಥವಾ ಸರ್ಕಾರದ ಗಮನ ಸೆಳೆದಿರುವ ಪ್ರಶ್ನೆಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕೆಲಸವನ್ನು ತೆಗೆದುಕೊಳ್ಳಲು ಬಹಳ ಹಿಂದಿನಿಂದಲೂ ಪ್ರಯತ್ನ ನಡೆಸುತ್ತಿದ್ದು ಅದು ಫಲಕಾರಿಯಾಗದ ಪ್ರಯುಕ್ತ ಭಾರತ ಸರ್ಕಾರದ ಸ್ವಾಮ್ಯದ ಡ್ರೆಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಗೆ ಈ ಕೆಲಸವನ್ನು ಪಹಿಸಲಾಯಿತು. ಈ ಸಂಸ್ಥೆಯು, ಹೆಚ್ಚು ಸಾಮರ್ಥ್ಯದ ಶಕ್ತಿಯುತವಾದ ಯಂತ್ರವನ್ನು ಹೂಳೆತ್ತುವ ಕೆಲಸದಲ್ಲಿ ತೊಡಗಿಸಿದ್ದು, ನವೆಂಬರ್ ೧೯೮೯ ರಲ್ಲಿ ಅವರ ಪ್ರಯತ್ನದಲ್ಲಿ ಪ್ರಾಯೋಗಿಕ ಹೂಳೆತ್ತುವಿಕೆಯ ಎರಡನೇ ದಿನ ಹೂಳೆತ್ತುವ ಯಂತ್ರವು ಸಮುದ್ರದ ಅಲೆಗಳ ರಭಸದಿಂದಾಗಿ ನೀರಿನಲ್ಲಿ ಮುಳುಗಿದ್ದುದರ ಪ್ರಯುಕ್ತ ಹೂಳೆತ್ತುವ ಕೆಲಸವನ್ನು ಬಿಟ್ಟುಕೊಡಲಾಯಿತು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಆಗಿಲ್ಲ. ಈ ವರ್ಷದ ಮೀಳಿಗಾಲ ಪ್ರಾರಂಭದ ನಂತರ ಯಾವುದೇ ಜೀವಹಾನಿ, ಸೊತ್ತು ನಾಶ ದುರಂತಗಳು ಗಮನಕ್ಕೆ ಬಂದಿರುವುದಿಲ್ಲ. ಸದ್ಯದ ಪ್ರತಿಕೂಲ ಹವಾಮಾನ ಸ್ಥಿತಿಯಲ್ಲಿ ಅಳಿವೆಯಲ್ಲಿನ ಮರಳನ್ನು ತೆಗೆಯುವುದು ಮತ್ತು ಅಳಿವೆಯಲ್ಲಿ ಶಾಂತ ಸ್ಥಿತಿಯನ್ನು ನಿರ್ಮಿಸುವಲ್ಲಿಯವರೆಗೆ, ಹೂಳೆತ್ತುವುದು ಅಸಾಧ್ಯವೆಂಬುದಾಗಿ ಮೇಲಿನ ಡ್ರೆಜಿಂಗ್ ಸಂಸ್ಥೆಯು ಅಭಿಪ್ರಾಯಪಟ್ಟಿರುತ್ತದೆ. ಅಳಿವೆಯಲ್ಲಿ ಶಾಂತ ಸ್ಥಿತಿಯನ್ನು ನಿರ್ಮಿಸಲು ಅಲೆತಡೆ ಗೋಡೆಗಳನ್ನು ಕಟ್ಟಲು ಉದ್ದೇಶಿಸಿದ್ದು ಇದರ ನಿರ್ಮಾಣ ಕಾರ್ಯವನ್ನು ಸಧ್ಯದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು.

ಈ ಹೂಳೆತ್ತುವ ಕೆಲಸದ ಬಗ್ಗೆ ಡ್ರೆಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯವರೊಡನೆ ಈಗಲೂ ವ್ಯವಹರಿಸಲಾಗುತ್ತಿದೆ.

೨. ಪಾಸನದಲ್ಲಿ ಪಂಪುಸೆಟ್ಟುಗಳಿಗೆ ಪವರ್ ಕೊಡುವುದು ಮತ್ತು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡುವುದು.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ತಿಂಗಳಿಂದ ಹಾಸನದ ಕೆ. ಇ. ಬಿ. ಯವರು ಲೈನು ಎಳೆಯಲು ಬೇಕಾದ ಮೆಟೀರಿಯಲ್ಸ್ ಇಲ್ಲದೆ ಕೆಲಸ ಸ್ಥಗಿತವಾಗಿದೆ. ಪಂಪುಸೆಟ್ಟುಗಳಿಗೆ ಪವರ್ ಕೊಡುವುದು, ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡುವುದು ಮುಂತಾದ ಎಲ್ಲಾ ಕೆಲಸಗಳು ನಿಂತಿರುವುದರಿಂದ ಮಾನ್ಯ ಇಂಡಸ್ಟ್ರೀಸ್ ಮತ್ತು ಪವರ್ ಮಿನಿಸ್ಟರ್‌ರವರ ಗಮನ ಸೆಳೆಯಬಯಸುತ್ತೇನೆ.

ಶ್ರೀಮತಿ ಸುಮಾವಸಂತ (ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳ ಪರವಾಗಿ).—ಮಾನ್ಯ ಉಪಾಧ್ಯಕ್ಷರೇ,.....

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಹಾಸನ ಕಾರ್ಯ ಮತ್ತು ಪಾಲನೆ ವಿಭಾಗಕ್ಕೆ ಈ ಸಾಲಿನಲ್ಲಿ (೧೯೯೦-೯೧) ಏಪ್ರಿಲ್ ೧೯೯೦ ರಿಂದ ಜೂನ್ ೧೯೯೦ರ ಅಂತ್ಯದವರೆಗೆ ಸರಬರಾಜು ಮಾಡಲಾಗಿರುವ ಸಲಕರಣೆಗಳ ವಿವರ ಕೆಳಕಂಡಂತಿದೆ.

ವಿವಿಧ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳು	———	೧೧೫
ವಿವಿಧ ಗಾತ್ರದ ಎ.ಸಿ.ಎಸ್.ಆರ್. ಕಂಡಕ್ಟರುಗಳು	———	೨೪೯ ಕಿ.ಮೀ.